# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಪಶುಪಾಲನಾ ಇಲಾಖೆಯ ಕಾರ್ಯಚಟುವಟಿಕೆಗಳ ವಿವರ

- **ಪಶುಪಾಲನಾ ಇಲಾಖೆಯ ಸಿಬ್ಬಂದಿ ವಿವರ:**

1) ಜಂಟಿ ನಿರ್ದೇಶಕರು (ಪಶುಪಾಲನೆ) - 1

೨) ಉಪ ನಿರ್ದೇಶಕರು (ಪಶುಪಾಲನೆ) - 1

೩) ಸಹಾಯಕ ನಿರ್ದೇಶಕರು (ಪಶುಪಾಲನೆ) -08 (ಎಂಟು ವಲಯಗಳು)

೪) ಸಹಾಯಕ ನಿರ್ದೇಶಕರು (ಪಶುಪಾಲನೆ) -02 (ಉಪ ನಿರ್ದೇಶಕರ ಕಛೇರಿ)

೫) ಹಿರಿಯ ಪಶುವೈದ್ಯಕೀಯ ಪರೀಕ್ಷಕರು -02 (ಪಶ್ಚಿಮ ಮತ್ತು ದಕ್ಷಿಣ ವಲಯ)

೬) ಲೆಕ್ಕಾಧಿಕಾರಿಗಳು -01 (ಉಪ ನಿರ್ದೇಶಕರ ಕಛೇರಿ)

೭) ಸಹಾಯಕ ಕಾರ್ಯಪಾಲಕ ಅಭಿಯಂತರ -01 ನಾಗರಿಕ/ನಗರ ಮಾಉಸಂಕೇ ನಿರ್ವಹಣೆ

೮) ಅಧೀಕ್ಷಕರು -02 (ಜಂಟಿ ನಿರ್ದೇಶಕರ ಕಛೇರಿ ಮತ್ತು
ಉಪ ನಿರ್ದೇಶಕರ ಕಛೇರಿ)

೯) ಬೆರಳಚ್ಚುಗಾರರು -01 (ಜಂಟಿ ನಿರ್ದೇಶಕರ ಕಛೇರಿ)

೧೦) ದ್ವಿ.ದ.ಸಹಾಯಕರು ಕೇಂದ್ರ) -02 (ಉಪ ನಿರ್ದೇಶಕರ ಕಛೇರಿ ಹಾಗೂ
ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ

೧೧) ಆರೋಗ್ಯ ಪರಿವೀಕ್ಷಕರ -02 (ನಾಗರೀಕ ವಧಾಗಾರ ಮತ್ತು ನಗರ ವಧಾಗಾರ)

೧೨) ವಾಹನ ಚಾಲಕರು -03 (ಜಂಟಿನಿರ್ದೇಶಕರ ಕಛೇರಿ-1,ಉಪನಿರ್ದೇಶಕರ
ಕಛೇರಿ–2.)

೧೩) ಕಂಪ್ಯೂಟರ್ ಆಪರೇಟರ್ -01 (ಉಪ ನಿರ್ದೇಶಕರ ಕಛೇರಿ)

೧೪) "ಡಿ" ದರ್ಜೆ ನೌಕರರು -08 (ಉಪನಿರ್ದೇಶಕರು–3,ಶ್ವಾನದಳ–2,ನಾ.ಮಾ.ಉ.ಸಂ
ಕೇ–2 ಮತ್ತು ನಗರ ಮಾಉಸಂಕೇ–1

...2

- **ಇಲಾಖೆಯ ಕರ್ತವ್ಯಗಳು**

1) ಬೀದಿನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮ.
2) ವಧಾಗಾರಗಳ ನಿರ್ವಹಣೆ – ಮೂರು ವಧಾಗಾರಗಳು
   ಅ) ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ

   ಆ) ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ ಫ್ರೇಜರ್ ಟೌನ್

   ಇ) ನಾಗರೀಕ ಹಂದಿ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ ಫ್ರೇಜರ್ ಟೌನ್

- **ಎ.ಬಿ.ಸಿ ಡಾಗ್ಸ್ ರೂಲ್ಸ್ 2001:**

ಬೀದಿ ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರ ಚಿಕಿತ್ಸೆಗೊಳಪಡಿಸಿ, ನಂತರ ನಾಯಿ ಹುಚ್ಚುರೋಗದ ವಿರುದ್ಧ (ರೇಬೀಸ್) ಲಸಿಕೆ ಮತ್ತು ಒಳ ಮತ್ತು ಹೊರ ಪರೋಪ ಜೀವಿಗಳ ಜಂತು ನಾಶಕ ಔಷಧಿ ನೀಡಿ ಯಾವ ಸ್ಥಳದಿಂದ ಹಿಡಿದು ತರಲಾಗಿತ್ತೋ ಪುನಃ ಅದೇ ಸ್ಥಳಕ್ಕೆ ಬಿಡಲಾಗುತ್ತದೆ. ವಾಸಿಯಾಗದ ಕಾಯಿಲೆಯಿಂದ ಹಾಗೂ ತೀವ್ರತರವಾಗಿ ಗಾಯಗೊಂಡು ನರಳುತ್ತಿರುವ ನಾಯಿಗಳನ್ನು ಹಿಡಿದು ನಿಯಮಾನುಸಾರ ದಯಾಮರಣಕ್ಕೊಳಪಡಿಸಲಾಗುತ್ತದೆ.

- **ಪ್ಯಾಕೇಜ್‌ಗಳ ವಿವರ:**

ಈ ಹಿಂದೆ 15 ಪ್ಯಾಕೇಜ್‌ಗಳಲ್ಲಿ ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮವನ್ನು ಮಾಡಲಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ವಲಯಗಳಲ್ಲಿನ 100 ವಾರ್ಡ್‌ಗಳನ್ನು 10 ಪ್ಯಾಕೇಜ್‌ಗಳಾಗಿ ಹಾಗೂ ಹೊರ ವಲಯದ 5 ವಲಯಗಳಿಗೆ ಪ್ರತಿ ವಲಯಕ್ಕೆ ಒಂದು ಪ್ಯಾಕೇಜ್‌ನಂತೆ ಕೆಲಸ ನಿರ್ವಹಿಸಲಾಗುತ್ತಿದ್ದು, 15 ಪ್ಯಾಕೇಜ್‌ಗಳ ಪೈಕಿ 9 ಪ್ಯಾಕೇಜ್‌ಗಳಲ್ಲಿ ಎ.ಡಬ್ಲ್ಯೂ.ಓ ಸಂಸ್ಥೆಗಳು ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮವನ್ನು ನಿರ್ವಹಿಸುತ್ತಿದ್ದಾರೆ. ಈಗ ಕಾನ್‌ಸ್ಟಿಟ್ಯೂಯೆನ್ಸಿ–ಡಿಲಿಮಿಟೇಷನ್ ಪ್ರಕಾರ ಪ್ಯಾಕೇಜುಗಳನ್ನು **20** ಎಂದು ಮಾರ್ಪಡಿಸಿ ೧೨ ಪ್ಯಾಕೇಜುಗಳಿಗೆ ಈ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು ಅಂತಿಮ ಹಂತದಲ್ಲಿರುತ್ತದೆ.

- **ಕಾರ್ಯ ನಿರ್ವಹಿಸುತ್ತಿರುವ ಎ.ಡಬ್ಲ್ಯೂ.ಓಗಳು ಮತ್ತು ಅವರಿಗೆ ನೀಡಲಾಗಿರುವ ಪ್ಯಾಕೇಜ್‌ಗಳ ವಿವರ:**

1) ಕರುಣಾ ಅನಿಮಲ್ ವೆಲ್ಫೇರ್ ಅಸೋಸಿಯೇಷನ್ ಆಫ್ ಕರ್ನಾಟಕ (ಪ್ಯಾ–1 & 2)
2) ಕಂಪ್ಯಾಷನ್ ಅನ್ ಲಿಮಿಟೆಡ್ ಪ್ಲಸ್ ಆಕ್ಷನ್ (ಪ್ಯಾ. 8 & 9)
3) ಅನಿಮಲ್ ರೈಟ್ಸ್ ಫಂಡ್ (ಪ್ಯಾ. 7, ಆರ್.ಆರ್.ನಗರ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳನ್ನು **198** ವಾರ್ಡ್‌ಗಳಾಗಿ ಪುನರ್ ವಿಂಗಡಿಸಿದ ನಂತರ ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಹಾಗೂ ತೀವ್ರಗತಿಯಲ್ಲಿ ಅನುಷ್ಠಾನಗೊಳಿಸುವ ಸಲುವಾಗಿ ಪ್ರತಿ ಪ್ಯಾಕೇಜ್‌ನಲ್ಲಿ ಕಡಿಮೆ ವಾರ್ಡ್‌ಗಳು ಬರುವಂತೆ ಮಾಡುವ ಸಲುವಾಗಿ ಪ್ಯಾಕೇಜ್‌ಗಳನ್ನು 15 ರಿಂದ 20 ಕ್ಕೆ ಹೆಚ್ಚಿಸಲಾಗಿದ್ದು, 12 ಪ್ಯಾಕೇಜ್‌ಗಳಿಗೆ

ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿರುತ್ತದೆ. ಅಲ್ಲದೆ ಪೂರ್ವ ವಲಯ ಮತ್ತು ದಕ್ಷಿಣ ವಲಯಗಳಲ್ಲಿ ಸಾರ್ವಜನಿಕರಿಂದ ಬೀದಿನಾಯಿಗಳ ಹಾವಳಿ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳು ಬರುತ್ತಿರುವುದರಿಂದ ಈ ಎರಡು ವಲಯಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ–ಕಂ–ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಲು ಸಹ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದ್ದು, ಮೊದಲನೆಯ ಕರೆಯಲ್ಲಿ ಕೇವಲ ಕರುಣಾ ಸಂಸ್ಥೆ ಮಾತ್ರ ಅರ್ಹತೆಯನ್ನು ಪಡೆದಿದ್ದು, ಎರಡನೇಯ ಕರೆಯಲ್ಲಿ ಆಂದ್ರ ಪ್ರದೇಶ ರಾಜ್ಯದ 02 ಎ.ಡಬ್ಲ್ಯೂ.ಓಗಳು, ಒಬ್ಬರು ಪಶುವೈದ್ಯರು ಮಹಾರಾಷ್ಟ್ರದ 03 ಎ.ಡಬ್ಲ್ಯೂ.ಓ ಗಳು ಹಾಗೂ ಕರ್ನಾಟಕದ 01 ಎ.ಡಬ್ಲ್ಯೂ.ಓ ಸಂಸ್ಥೆ ಸ್ಪಂದಿಸಿದ್ದು, ದರಗಳ ಸಂಧಾನ ಸಭೆಯನ್ನು ಅಪರ ಆಯುಕ್ತರು (ಆರೋಗ್ಯ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ 31.05.2010 ರಂದು ಮಾಡಲಾಗಿದ್ದು, ದಿನಾಂಕ:05.07.2010ರಂದು ಎ.ಬಿ.ಸಿ ಮಾನಿಟರಿಂಗ್ ಸಭೆಯಲ್ಲಿ ದರ ಸಂಧಾನದ ಮೂಲಕ ನಿಗಧಿಗೊಳಿಸಿರುವ ದರಗಳಿಗೆ ಒಪ್ಪಿಗೆ ಪಡೆಯಲು ಸಭೆಯನ್ನು ಕರೆಯಲಾಗಿರುತ್ತದೆ.

- **ಜೂನ್–ಜುಲೈ 2007 ರ ಶ್ವಾನ ಗಣತಿ ಪ್ರಕಾರ ಬೀದಿನಾಯಿಗಳ ಸಂಖ್ಯೆ – ಗಂಡು 105466, ಹೆಣ್ಣು 78292 ಒಟ್ಟು 183758.**
- ಸಾಕುನಾಯಿಗಳ ಸಂಖ್ಯೆ–ಗಂಡು–90460, ಹೆಣ್ಣು–53062, ಒಟ್ಟು–1,43,522.
- **2010-11ನೇ ಸಾಲಿನಲ್ಲಿ ಎ.ಬಿ.ಸಿ – ಎ.ಆರ್.ವಿ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿ ವಿವರ:**

| ಹಿಡಿದ ನಾಯಿಗಳ ಸಂಖ್ಯೆ | ಎ.ಆರ್.ವಿ | | | | ದಯಾ ಮರಣ |
|---|---|---|---|---|---|
| | ಒಟ್ಟು | ಎ.ಬಿ.ಸಿ ಸಹಿತ | ಎ.ಬಿ.ಸಿ ರಹಿತ | ಒಟ್ಟು | |
| **77093** | **69141** | **69141** | **47275** | **1,16.416** | **1724** |

- **ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮ ಪ್ರಾರಂಭವಾದ ದಿನಾಂಕದಿಂದ (01.11.2000 ರಿಂದ ಮಾರ್ಚಿ–2011 ಅಂತ್ಯಕ್ಕೆ ) ಸಾಧಿಸಿದ ಪ್ರಗತಿ:**

| ಹಿಡಿದ ನಾಯಿಗಳ ಸಂಖ್ಯೆ | ಎ.ಆರ್.ವಿ | | | | ದಯಾ ಮರಣ |
|---|---|---|---|---|---|
| | ಒಟ್ಟು | ಎ.ಬಿ.ಸಿ ಸಹಿತ | ಎ.ಬಿ.ಸಿ ರಹಿತ | ಒಟ್ಟು | |
| **4,31,509** | **3,60,201** | **3,54,142** | **2,51,745** | **6,05,887** | **53,104** |

- ಎ.ಬಿ.ಸಿ–ಎ.ಆರ್.ವಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಕೈಗೊಳ್ಳ ಬೇಕಾದ ಕ್ರಮಗಳು:

  1) ಶಸ್ತ್ರ ಚಿಕಿತ್ಸೆಗೆ ಒಳಪಡದಂತಹ ಬೀದಿನಾಯಿಗಳು ಹೆಚ್ಚಾಗಿ ಇರುವಂತಹ ವಲಯಗಳಲ್ಲಿ ನಿಯಮಿತವಾಗಿ ಪ್ಯಾಕೇಜ್‌ವಾರು ಎ.ಬಿ.ಸಿ ಕಾರ್ಯಕ್ರಮ ಮಾಡುವುದರ ಜೊತಯಲ್ಲಿಯೇ ಆದ್ಯತೆಯ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಎ.ಡಬ್ಲ್ಯೂ.ಓ ಅಥವಾ ಪಶುವೈದ್ಯರ ನೆರವಿನೊಂದಿಗೆ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕಗಳನ್ನು ಬಳಸಿಕೊಂಡು ಹಾಗೂ ಸಂತಾನ ಹರಣ ಶಸ್ತ್ರಚಿಕಿತ್ಸಾ

ಶಿಬಿರಗಳನ್ನು ಏರ್ಪಡಿಸುವ ಮೂಲಕ ಹೆಚ್ಚಿನ ಸಂಖ್ಯೆಯ ಬೀದಿನಾಯಿಗಳಿಗೆ ಅತೀ ಕಡಿಮೆ ಅವಧಿಯಲ್ಲಿ ಎ.ಬಿ.ಸಿ ಶಸ್ತ್ರಚಿಕಿತ್ಸೆಯನ್ನು ಮಾಡಲು ಕಾರ್ಯಕ್ರಮ ರೂಪಿಸುವುದು.

2) ಹುಚ್ಚುನಾಯಿ ರೋಗಕ್ಕೆ ತುತ್ತಾದ ನಾಯಿಗಳನ್ನು ಹಿಡಿದು ತಪಾಸಣೆಗೆ ಒಳಪಡಿಸಿ, ಹುಚ್ಚುನಾಯಿ ರೋಗ ಇದೆ ಎಂದು ದೃಢಪಟ್ಟ ಕೂಡಲೇ ಅಂತಹ ಪ್ರದೇಶದ ಸುತ್ತಲಿನ ಬೀದಿನಾಯಿಗಳಿಗೆ ಎ.ಆರ್.ವಿ ಲಸಿಕೆಯನ್ನು ನಿಯಮಿತವಾಗಿ ಹಾಕುವುದು.
3) ಬೀದಿನಾಯಿಗಳನ್ನು ದತ್ತು ತೆಗೆದುಕೊಳ್ಳುವಂತೆ ಸಾರ್ವಜನಿಕರನ್ನು ಪ್ರೇರೇಪಿಸುವುದು.
4) ಆಹಾರ ತ್ಯಾಜ್ಯಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವಂತೆ, ಹಾಗೂ ಬೀದಿನಾಯಿಗಳಿಗೆ ಬೀದಿಗಳಲ್ಲಿ ಆಹಾರ ದೊರೆಯದಂತೆ ಮಾಡಲು ಸಾರ್ವಜನಿಕರನ್ನು ಮಾಧ್ಯಮಗಳ ಮುಖಾಂತರ ಪ್ರೇರೇಪಿಸು ವುದು
5) ಸಾಕುನಾಯಿಗಳ ಮಾಲೀಕರಿಗೆ ಅನಿಯಮಿತವಾಗಿ ನಾಯಿ ಮರಿಗಳ ಸಂತಾನೋತ್ಪತ್ತಿ ಮಾಡದಂತೆ ಮಾಧ್ಯಮಗಳ ಮೂಲಕ ಮನವರಿಕೆ ಮಾಡುವುದು.
6) ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಬೀದಿನಾಯಿಗಳೊಂದಿಗೆ ಯಾವ ರೀತಿ ವರ್ತಿಸಬೇಕು ಎಂಬುದರ ಬಗ್ಗೆ ವಿಸ್ತರಣಾ ಚಟುವಟಿಕೆಗಳ ಮೂಲಕ ತಿಳಿಯಪಡಿಸುವುದು.
7) ಸಾರ್ವಜನಿಕರು ಬೀದಿನಾಯಿಗಳಿಂದ ಕಡಿತಕ್ಕೆ ಒಳಗಾಗದೇ ಇರಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಧ್ಯಮಗಳ ಮೂಲಕ ತಿಳಿಯಪಡಿಸುವುದು.
8) ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಲಯಗಳಲ್ಲಿ ಇರುವ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಮತ್ತು ಒಳಪಡದ ಬೀದಿನಾಯಿಗಳ ಗಣತಿ ಸಮೀಕ್ಷೆ ನಡೆಸುವುದು.

- <u>ವಧಾಗಾರಗಳ ನಿರ್ವಹಣೆ:</u>

ದಿನಾಂಕ: 01.04.2009ರಿಂದ ಮೂರು ವಧಾಗಾರಗಳು ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದಿಂದ ಪಾಲಿಕೆಗೆ ಹಸ್ತಾಂತರಗೊಂಡಿರುತ್ತದೆ.

1) ನಾಗರೀಕ ವಧಾಗಾರದಲ್ಲಿ ದೊಡ್ಡ ಪ್ರಾಣಿಗಳನ್ನು ಹಾಗೂ ಸಣ್ಣ ಪ್ರಾಣಿಗಳನ್ನು, ಅಂದರೆ ಕುರಿ, ಮೇಕೆಗಳನ್ನು ಆಹಾರಕ್ಕಾಗಿ ವಧೆ ಮಾಡಿ ಸಂಸ್ಕರಿಸಲಾಗುತ್ತಿದೆ.
2) ನಾಗರೀಕ ಹಂದಿ ವಧಾಗಾರದಲ್ಲಿ ಹಂದಿಗಳನ್ನು ಆಹಾರಕ್ಕಾಗಿ ವಧೆ ಮಾಡಲಾಗುತ್ತಿದೆ.
3) ನಗರ ವಧಾಗಾರದಲ್ಲಿ ಸಣ್ಣ ಪ್ರಾಣಿಗಳು ಅಂದರೆ ಕುರಿ, ಮೇಕೆಗಳನ್ನು ಆಹಾರಕ್ಕಾಗಿ ವಧೆ ಮಾಡಿ ಸಂಸ್ಕರಿಸಲಾಗುತ್ತಿದೆ.
4) ವಧಾಗಾರಗಳಲ್ಲಿ ವಧೆಯಾಗುವ ಪ್ರಾಣಿಗಳ ಆರೋಗ್ಯದ ತಪಾಸಣೆ ಹಾಗೂ ವಧೆಯ ನಂತರದ ಮುಂಡಗಳ ಗುಣಮಟ್ಟದ ಪರಿಶೀಲನೆಯನ್ನು ವಧಾಗಾರಗಳಿಗೆ ನಿಯೋಜನೆಗೊಂಡಿರುವ ಪಶು ವೈದ್ಯರು ನಿರ್ವಹಿಸುತ್ತಿದ್ದಾರೆ.
5) ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕದ ಸಂಗ್ರಹಣೆಯ ಹಕ್ಕುಗಳನ್ನು ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ನೀಡಲಾಗಿರುತ್ತದೆ.

- **<u>ನಗರ ಮತ್ತು ನಾಗರೀಕ ವಧಾಗಾರದಲ್ಲಿನ 2009-10ನೇ ಸಾಲಿನ ಪ್ರಗತಿ</u>**

| ವಿವರ | ಎತ್ತುಗಳು | ಎಮ್ಮೆಗಳ | ಕುರಿ | ಮೇಕೆ | ಹಂದಿ |
|---|---|---|---|---|---|
| ವಧೆಗೆ ಬಂದ ಪ್ರಾಣಿಗಳ ಸಂಖ್ಯೆ | 40048 | 8271 | 287710 | 104510 | 6183 |
| ವಧಾಪೂರ್ವ ಪರೀಕ್ಷೆಯಲ್ಲಿ ತಿರಸ್ಕೃತವಾದವು | 1005 | 433 | 11848 | 6424 | 245 |

| | | | | | |
|---|---|---|---|---|---|
| ವಧೆಯಾದ ಪ್ರಾಣಿಗಳ ಸಂಖ್ಯೆ | 39043 | 7838 | 275862 | 98086 | 5938 |
| ವಧಾನಂತರ ಪಿ.ಎಂ. ಪರೀಕ್ಷೆಯಲ್ಲಿ ತಿರಸ್ಕೃತವಾದವು | 170 | 55 | 1220 | 389 | 104 |
| ವಧೆಯ ನಂತರ ಒಟ್ಟು ಸ್ಥಿರವಾದ ಪ್ರಾಣಿಗಳ ಸಂಖ್ಯೆ | **38873** | **7783** | **274642** | **97697** | **5834** |

- ಮಾನ್ಯ ಆಯುಕ್ತರ ಆದೇಶ ಸಂಖ್ಯೆ: ಜಂ.ನಿ(ಪಪಾ)/ಪಿಆರ್/648/10-11. ದಿನಾಂಕ: 28.05.2010 ರಂತೆ ಪಶುಪಾಲನಾ ಇಲಾಖೆಯ ಅಧಿಕಾರಿಗಳಿಗೆ ಈ ಕೆಳಗಿನಂತೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಆದೇಶ ಹೊರಡಿಸಲಾಗಿರುತ್ತದೆ.

1) ಮಾಂಸದ ಅಂಗಡಿ ಹಾಗೂ ಕೋಳಿ, ಮೀನು, ಹಂದಿ ಮಾಂಸದ ಅಂಗಡಿಗಳ ಪರವಾನಗಿ ನೀಡುವುದು, ನವೀಕರಿಸುವುದು, ಶುಚಿತ್ವದ ಪರಿಶೀಲನೆ, ಅನಧಿಕೃತ ಪ್ರಾಣವಧೆ ನಿರ್ಬಂಧಿಸುವುದು,
2) ಸಾಕುನಾಯಿಗಳಿಗೆ ಹಾಗೂ ಕೆನಲ್‌ಗಳಿಗೆ ಪರವಾನಗಿ ನೀಡುವುದು ಹಾಗೂ ನವೀಕರಿಸುವುದು.
3) ಬೀದಿ ದನಗಳ ನಿಯಂತ್ರಣ ಹಾಗೂ ದನಗಳ ದೊಡ್ಡಿ ನಿರ್ವಹಣೆ.

**ಈ** ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಮೇಲೆ ತಿಳಿಸಿದ ಕೆಲಸಗಳ ನಿರ್ವಹಣೆಗಾಗಿ ಪಶು ಪಾಲನಾ ವಿಭಾಗಕ್ಕೆ ಅಗತ್ಯವಾದ ಹುದ್ದೆಗಳ ಸೃಷ್ಟಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಜಂಟಿ ನಿರ್ದೇಶಕರು (ಪಶುಪಾಲನೆ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

## <u>ಪಶುಪಾಲನಾ ಇಲಾಖೆಯ ಕಾರ್ಯಚಟುವಟಿಕೆಗಳ</u>

- ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವುದು(ಬೀದಿ ನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿ ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ನೀಡಿ ಹಿಡಿದ ಸ್ಥಳದಲ್ಲಿಯೇ ಬಿಡುವುದು (ಪ್ರಾಣಿ ಸಂತಾನ ನಿಯಂತ್ರಣ (ಶ್ವಾನ) ನಿಯಮ 2001 ಪ್ರಕಾರ)).
- ಸಾರ್ವಜನಿಕರಿಗೆ ಬೀದಿನಾಯಿಗಳ ಕಡಿತದಿಂದ ಆಗುವ ತೊಂದರೆಗಳ ಬಗ್ಗೆ ಕ್ರಮವಹಿಸುವುದು.
- ವಧಾಗಾರಗಳ ನಿರ್ವಹಣೆ ಹಾಗೂ ಗುಣಮಟ್ಟದ ಮಾಂಸ ಉತ್ಪಾದನೆ.

**<u>ಶ್ವಾನ ಗಣತಿ ಜೂನ್-ಜುಲೈ 2007ರಲ್ಲಿ ಇದ್ದಂತೆ:</u>**

- ಸಾಕು ನಾಯಿಗಳ ಸಂಖ್ಯೆ : 1,43,522
- ಬೀದಿ ನಾಯಿಗಳ ಸಂಖ್ಯೆ : 1,83,758
- **<u>ಒಟ್ಟು ನಾಯಿಗಳ ಸಂಖ್ಯೆ : 3,27,280</u>**

**<u>ನಾಯಿ ಕಡಿತದ ವಿವರ (2009-2010):</u>**

- ಸಾಕು ನಾಯಿಗಳ ಕಡಿತದ ಪ್ರಕರಣದ ಸಂಖ್ಯೆ : 7,658
- ಬೀದಿ ನಾಯಿಗಳ ಕಡಿತದ ಪ್ರಕರಣದ ಸಂಖ್ಯೆ : 12,897
- **<u>ಒಟ್ಟು ನಾಯಿಗಳ ಕಡಿತಕ್ಕೆ ಒಳಗಾದವರ ಸಂಖ್ಯೆ : 20,555</u>**

ಪ್ರಸಕ್ತ ಸಾಲಿನಲ್ಲಿ ಈವರೆವಿಗೂ ಆಗಿರುವ ನಾಯಿ ಕಡಿತಗಳು

- ಸಾಕು ನಾಯಿಗಳ ಕಡಿತದ ಪ್ರಕರಣದ ಸಂಖ್ಯೆ : 5,961
- ಬೀದಿ ನಾಯಿಗಳ ಕಡಿತದ ಪ್ರಕರಣದ ಸಂಖ್ಯೆ : 9,222
- **<u>ಒಟ್ಟು ನಾಯಿಗಳ ಕಡಿತಕ್ಕೆ ಒಳಗಾದವರ ಸಂಖ್ಯೆ : 15,183</u>**

**<u>ಎಬಿಸಿ-ಎಆರ್‌ವಿ ಕಾರ್ಯಕ್ರಮದಲ್ಲಿ ಭಾಗವಯಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ವಿವರ:</u>**

<u>ಸರ್ಕಾರೇತರ ಸಂಸ್ಥೆಗಳ ಹೆಸರು</u>:

- ಕಂಪ್ಯಾಷನ್ ಅನ್-ಲಿಮಿಟೆಡ್ ಪ್ಲಸ್ ಆ್ಯಕ್ಷನ್ (ಕ್ಯೂಪ): ಎಡಬ್ಲ್ಯೂಎಸ್
- ಅನಿಮಲ್ ರೈಟ್ಸ್ ಫಂಡ್ (ಎಆರ್‌ಎಫ್) : ಶ್ರೀನಿವಾಸಲು ಕರ್ನಾಟಿ
- ಕರುಣಾ ಅನಿಮಲ್ ವೆಲ್ಫೇರ್ ಅಸೋಸಿಯೇಷನ್ ಆಫ್ ಕರ್ನಾಟಕ : ವೆಟ್ಸ್ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ ಡೆವಲಪ್ಮೆಂಟ್

: ವೆಟ್ಸ್ ಫಾರ್ ಅನಿಮಲ್ಸ್, ಮಹಾರಾಷ್ಟ್ರ

**<u>2009-2010ನೇ ಸಾಲಿನ ಎಬಿಸಿ-ಎಆರ್‌ವಿ ಕಾರ್ಯಕ್ರಮದ ಪ್ರಗತಿಯ ವರದಿ:</u>**

| | | 2010-2011 **ಅಕ್ಟೋಬರ್ ಅಂತ್ಯಕ್ಕೆ ಸಾಧಿಸಿರುವ ಪ್ರಗತಿ** |
|---|---|---|
| ➢ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿದ ನಾಯಿಗಳ ಸಂಖ್ಯೆ: | 29,349 | 24,167 |
| ➢ ಎಆರ್‌ವಿ ಲಸಿಕೆ ಹಾಕಲಾದ ನಾಯಿಗಳ ಸಂಖ್ಯೆ : | 51,765 | 41,379 |
| ➢ ದಯಾಮರಣಕ್ಕೊಳಗಾದ ನಾಯಿಗಳ ಸಂಖ್ಯೆ : | 1,235 | 983 |

**<u>ಎಬಿಸಿ-ಎಆರ್‌ವಿ ಕಾರ್ಯಕ್ರಮದಲ್ಲಿ ನವಂಬರ್-2000</u>** <u>ರಿಂದ</u>
**<u>ಅಕ್ಟೋಬರ್-2010 ಅಂತ್ಯಕ್ಕೆ ಸಾಧಿಸಿರುವ ಪ್ರಗತಿ</u>**

| | |
|---|---|
| ➢ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿದ ನಾಯಿಗಳ ಸಂಖ್ಯೆ: | 3,15,227 |
| ➢ ಎಆರ್‌ವಿ ಲಸಿಕೆ ಹಾಕಲಾದ ನಾಯಿಗಳ ಸಂಖ್ಯೆ | 5,30,850 |
| ➢ ದಯಾಮರಣಕ್ಕೊಳಗಾದ ನಾಯಿಗಳ ಸಂಖ್ಯೆ | 52,363 |

ಎಬಿಸಿ ಕಾರ್ಯಕ್ರಮದ ವೆಚ್ಚದ ವಿವರ:

**<u>2009-2010ನೇ ಸಾಲಿನಲ್ಲಿ ಆದ ವೆಚ್ಚ : 1,05,00,000</u>**

**<u>2010 ಏಪ್ರಿಲ್‌ರಿಂದ ಅಕ್ಟೋಬರ್ 2010 ರವರೆಗೆ ಆದ ಒಟ್ಟು ವೆಚ್ಚ: 1,19,27,318</u>**

**<u>ವಧಾಗಾರಗಳು:</u>**

ದಿನಾಂಕ: 01.04.2009 ರಿಂದ ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದವರಿಂದ ಮೂರು ವಧಾಗಾರಗಳು ಪಾಲಿಕೆ ಹಸ್ತಾಂತರಗೊಂಡಿರುತ್ತದೆ.

- ➢ ನಾಗರಿಕ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ, ಟ್ಯಾನರಿ ರಸ್ತೆ, ಫ್ರೇಜರ ಟೌನ್.
- ➢ ನಗರ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ,, ಉಸ್ಮಾನ್‌ಖಾನ್ ರಸ್ತೆ
- ➢ ನಾಗರಿಕ ಹಂದಿ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ, ಟ್ಯಾನರಿ ರಸ್ತೆ, ಫ್ರೇಜರ ಟೌನ್.

ವಧಾಗಾರಗಳಲ್ಲಿ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಪ್ರಕ್ರಿಯೆಯನ್ನು ಪೂರ್ಣ ಗೊಳಿಸಲಾಗಿದ್ದು, ಹೊಸ ಟೆಂಡರ್ ದರಗಳಂತೆ ಕಿಸ್ತ್ ಮೊತ್ತವನ್ನು ಸಂಗ್ರಹಿಸಲಾಗುತ್ತಿದೆ.

**2009-2010 ರವರೆಗೆ ವಧೆಯಾದ ಜಾನುವಾರುಗಳ ಸಂಖ್ಯೆ:**

| | | | ಪ್ರಸಕ್ತ ಸಾಲಿನಲಿ ಅಕ್ಟೋಬರ್-2010 ರವರೆಗೆ |
|---|---|---|---|
| ✓ ಎತ್ತುಗಳು | : | 38,870 | 26,322 |
| ✓ ಎಮ್ಮೆಗಳು | : | 7,780 | 4,484 |
| ✓ ಕುರಿಗಳು | : | 1,77,500 | 1,78,115 |
| ✓ ಮೇಕೆಗಳು | : | 77,900 | 44,733 |
| ✓ ಹಂದಿಗಳು | : | 5,800 | 4,485 |

**ವಧಾಗಾರಗಳ ರಾಜಸ್ವ ಸಂಗ್ರಹದ ವಿವರ- ದಿನಾಂಕ: 01.04.2009 ರಿಂದ 31.03.2019ವರೆಗೆ:**

| | | ಪ್ರಸಕ್ತ ಸಾಲಿನಲ್ಲಿ ಅಕ್ಟೋಬರ್-2010 ರವರೆಗೆ |
|---|---|---|
| ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕದ ಕಿಸ್ತ್ ಮೊತ್ತ: | ರೂ. 65,38,758/- | 65.77 |
| ದಬೋಟಿ ಅಂಗಡಿಗಳು, ಮಂಡಿ, ಇತರೆ ಬಾಡಿಗೆ | ರೂ. 1,56,100/- | 1.38 |

ಜಂಟಿ ನಿರ್ದೇಶಕರು(ಪಪಾ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ